ಮಾಡು ಅಂತಾರೆ. ಅಂಥಾದ್ರಲ್ಲಿ ನನ್ನದು ಒಂದೇ ಒಂದು ಸುಳ್ಳು..." ಮಾತು ಮುಂದುವರಿಯಲು ಬಿಡದಂತೆ "ನೋಡಿ ಮಿಸ್ಟರ್... ನಾನು ಹಾಗೆಲ್ಲ ಯಾವ ಸುಳ್ಳನ್ನೂ ಹೇಳೋದಿಲ್ಲ. ಇಲ್ಲಿ ಇಂಥ ಮದುವೆಗಳಲ್ಲಿ ಟ್ರಾನ್ಸ್‌ಪರೆನ್ಸಿ ಮುಖ್ಯ. ಅದೇನು ಸುಳ್ಳು ಹೇಳಿದ್ದೀರ ಹೇಳಿಬಿಡಿ" ಎಂದೆ.

"ಏನಿಲ್ಲ. ನಂಗೆ ಮೂರು ಮದ್ವೆಯಾಗಿದೆ ಅಂದಿದ್ದೆನಲ್ಲ. ಅದು ಸುಳ್ಳು" ಎಂದ.

"ಅಂದ್ರೆ?" ಎಂದೆ ಹುಬ್ಬೇರಿಸುತ್ತಾ.

"ನಂಗೆ ಮದ್ವೆನೇ ಆಗಿಲ್ಲ" ಎಂದಾಗ ನಿಜವಾದ ಶಾಕ್ ಆಯಿತು.

"ಮತ್ತೆ ನೀವು ಹೊಸ ಜೀವನ ಡಾಟ್ ಕಾಂನಲ್ಲಿ ಯಾಕೆ ನೋಂದಾಯಿಸಿಕೊಂಡ್ರಿ?" ಎಂದೆ ಅಚ್ಚರಿಯಿಂದ.

"ಅದೂ... ನಂಗೆ ಯಾರಾದ್ರೂ ಡಿವೋರ್ಸಿನೋ, ವಿಡೋನೋ ಮಾಡ್ಕೋಬೇಕು ಅಂತ ಅನ್ನಿಸ್ತು ಅದಕ್ಕೆ" ಎಂದ.

"ದಟ್ಸ್ ಗುಡ್; ಒಳ್ಳೇದು. ಈಗ ನೀವು ಇಷ್ಟಪಟ್ಟಿರೋ ಹುಡ್ಗಿ ವಿಧವೇನೋ ವಿಚ್ಛೇದಿತೇನೋ?" ಎಂದೆ.

"ವಿಚ್ಛೇದಿತೆ. ಆದರೆ ಮಕ್ಕಳಿಲ್ಲ. ತುಂಬಾ ಸ್ಮಾರ್ಟ್ ಬ್ಯೂಟಿಫುಲ್ ಎಫಿಶಿಯಂಟ್" ಎಂದ ನಿಧಾನವಾಗಿ.

"ಯಾರಪ್ಪಾ ಅಷ್ಟು ಬ್ಯೂಟಿಫುಲ್ ಆಗಿರೋದು. ನಾನು ತೋರಿಸಿದ ಹುಡುಗೀರಲ್ಲಿ ತುಂಬಾ ಬ್ಯೂಟಿಫುಲ್ ಆಗಿದ್ದಿದ್ದು ಮಮತಾ, ನೀವು ಅವಳ ಕುರಿತು ಯಾವ ಆಸಕ್ತೀನೂ ತೋರಿಸಲಿಲ್ಲ. ಹಾಗಿರುವಾಗ..." ಎಂದೆ ಗೊಂದಲದಿಂದ

"ನಾನೆಲ್ಲಿ ಮಮತಾ ಅಂದೆ. ಸ್ವಲ್ಪ ಯೋಚನೆ ಮಾಡಿದ್ರೆ ಗೊತ್ತಾಗ್ತಿತ್ತು. ಆ ಹುಡುಗಿ ನೀವೇ ಅಂತ" ಎಂದ ಲಘು ಕಂಪನದಿಂದ.

"ವ್ವಾಟ್! ಆರ್ ಯೂ ಮ್ಯಾಡ್" ಎಂದು ಹೆಚ್ಚು ಕಡಿಮೆ ಕಿರುಚಿದ್ದೆ.

"ಯಾಕಾಗಬಾರದು? ವೈ ನಾಟ್ ಯೂ? ನೀವೇನು ಯಾರೂ ಪ್ರಪೋಸ್ ಮಾಡಬಾರದ ಅಥವಾ ಮಾಡಲಾಗದ ಸ್ವಾರಾ? ಇದೊಳ್ಳೆ ಕತೆಯಾಯ್ತಲ್ಲ ನಿಮ್ದು" ಎಂದ.

"ಚೆನ್ನಾಗಿದೇರಿ. ಮದ್ವೆಯಾಗೋ ಬ್ರಾಹ್ಮಣ ಅಂದ್ರೆ ನೀನೇ ನನ್ಹೆಂಡ್ತಿ ಅಂದನಂತೆ. ಇಷ್ಟಕ್ಕೂ ನಾನು ಮದ್ವೆಯಾಗ್ತೀನಿ ಅಂತ ಹೇಳಿದ್ದೀನಾ ನಿಮ್ಹತ್ರ? ಹಂಗೆ ಬೇಕಾಗಿದ್ರೆ ನಮ್ಮಾಫೀಸಿಗೆ ಬರೋ ನೂರು ಪ್ರೊಫೈಲ್‌ಗಳನ್ನು ಸ್ಕ್ರೀನ್ ಮಾಡಿ ಆರಿಸ್ಕೋತಿದ್ದೆ" ಎಂದೆ ತುಸು ಕೋಪದಿಂದ. "ಈಗಲೂ ಅದನ್ನೇ ಮಾಡಿ. ನೂರು ಹುಡುಗರ ಪ್ರೊಫೈಲ್ ಫೋಟೊಗಳನ್ನು ತೆಗೆದು ನೋಡಿ... ಎಲ್ಲಕ್ಕಿಂತ ಬೆಸ್ಟಾಗಿರದು ನಂದೇ ಆಗಿರುತ್ತೆ, ಐ ಬೆಟ್. ನನ್ನಂಥವನೂ ನೀವೇ ಬೇಕೂಂತ ಹುಡುಕ್ಕೊಂಡು ಇಂಡಿಯಾಗಿ ಬಂದಿದೀನಿ. ಯಾಕೆ ಗೊತ್ತಾ. ನಿಮ್ಮ ಕಂಪೆನಿ ವೆಬ್‌ಸೈಟನ್ನು ತುಂಬಾ ನಿಕಟವಾಗಿ ಗಮನಿಸಿಕೊಂಡು ಬಂದಿದ್ದೀನಿ. ನಿಮ್ಮ ಬ್ಲಾಗುಗಳನ್ನು ಓದಿದೀನಿ. ನೀವು ನನ್ನ ವೇವ್‌ಲೆಂತ್‌ಗೆ ಮ್ಯಾಚ್ ಆಗ್ತೀರಿ ಅನ್ನಿಸಿದ ಮೇಲೆ ನಾನಿಲ್ಲಿಗೆ ಬಂದಿದ್ದು" ಎಂದು ನಗಾಡುವಾಗ ನನ್ನ ಕೋಪವೆಂಬುದು ಬಹುಪಾಲು ಆವಿಯಾಗಿದ್ದರೂ ತೋರಿಕೆಗಾಗಿ ಹಾಗೇ ಇರುತ್ತಾ,

"ಹಾಗಿದ್ರೆ ನೇರಾ ನೇರಾ ಕೇಳಬೇಕಿತ್ತು. ಇದೇನು ನಾಟಕ? ಇಷ್ಟಕೂ ನಂಗೀಗ ಮದುವೆಯಾಗಕ್ಕೆ ಇಂಟರೆಸ್ಟ್ ಇಲ್ಲ. ಒಂದು ಮದ್ವೆ ಕಹೀನೆ ನಂಗೆ ಸಾಕಾಗಿದೆ" ಎಂದೆ.

"ರೀ ಮೇಡಮ್, ಜೀವನದ ಎಲ್ಲ ಅನುಭವಗಳೂ ಕಹಿಯಾಗೇ ಇರೋದಿಲ್ಲ. ಇಷ್ಟಕ್ಕೂ ಹೊಸ